**ಓ.ಎಸ್. ನಂಃ 402/2021**

**ಪಿಡಬ್ಲ್ಯೂಃ1**

**ದಿನಾಂಕಃ 23.07.2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಟಿ.ಜಿ ವಕೀಲರಿಂದಃ**

12. ಈ ದಾವೆಯಲ್ಲಿ ಪ್ರತಿವಾದಿಯರು ತಮ್ಮ ಪ್ರತಿವಾದಪತ್ರದ ಜೊತೆ ಸಲ್ಲಿಸಿರುವ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ದಾಖಲೆಗಳ ಬಗ್ಗೆ ನಾನು ನನ್ನ ವಕೀಲರೊಂದಿಗೆ ಕೇಳಿ ತಿಳಿದುಕೊಂಡಿರುವುದಿಲ್ಲ. ಸಾಮಾನ್ಯವಾಗಿ ಖರೀದಿ ಮಾಡಿದ ಜಮೀನಿನ ಅಕ್ಕಪಕ್ಕದಲ್ಲಿ ಯಾರು ಸ್ವಾಧೀನದಲ್ಲಿ ಇರುತ್ತಾರೋ ಅವರ ಹೆಸರನ್ನು ಖರೀದಿ ಮಾಡಿದ ಜಮೀನಿನ ಖರೀದಿ ಪತ್ರದ ಚೆಕ್ಕುಬಂದಿಗಳಲ್ಲಿ ನಮೂದಿಸಲಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿ ಇರುವ ಹನುಮಂತೇಗೌಡ ಮತ್ತು ನಾಗೇಗೌಡರ ಜಮೀನುಗಳು ಸರ್ವೆ ನಂಬರ್ 31 ರಲ್ಲಿಯೇ ಇರುತ್ತದೆ. ಸರ್ವೆ ನಂಬರ್ 31 ರಲ್ಲಿ ಹಲವಾರು ಪೋಡುಗಳಾಗಿವೆ ಎಂದರೆ ಸರಿ. ಸರ್ವೆ ನಂಬರ್ 31 ರ ಎಷ್ಟನೇ ಪೋಡಿನಲ್ಲಿ ಸದರಿ ಹನುಮಂತೇಗೌಡ ಮತ್ತು ನಾಗೇಗೌಡರ ಜಮೀನು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಹನುಮಂತೇಗೌಡ ಮತ್ತು ನಾಗೇಗೌಡ ತಮ್ಮ ತಮ್ಮ ಜಮೀನುಗಳನ್ನು ಕ್ರಯದ ಮೂಲಕ ಕೊಂಡಿರುತ್ತಾರೆ. ಅವರ ಕ್ರಯಪತ್ರಗಳನ್ನು ನಾನು ನೋಡಿರುವುದಿಲ್ಲ. ನಾನು ದಾವಾ ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿಯೇ ಸದರಿ ಹನುಮಂತೇಗೌಡ ಮತ್ತು ನಾಗೇಗೌಡರು ತಮ್ಮ ಜಮೀನುಗಳನ್ನು ಖರೀದಿಮಾಡಿರುತ್ತಾರೆ ಎಂದರೆ ಸರಿ. ಹನುಮಂತೇಗೌಡ ಮತ್ತು ನಾಗೇಗೌಡರು ಖರೀದಿ ಮಾಡಿದ ಜಮೀನುಗಳ ಖರೀದಿ ಪತ್ರಗಳ ಚೆಕ್ಕಬಂದಿಯಲ್ಲಿ 1 ನೇ ಪ್ರತಿವಾದಿಯ ಹೆಸರು ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಸ್ವಾಮೀಗೌಡ ಬಿನ್ ಚಿಕ್ಕಪ್ಪುಗೌಡರಿಗೆ ದಾವಾ ಆಸ್ತಿಯನ್ನು ನನಗೆ ಮಾರಾಟ ಮಾಡಲು ಯಾವುದೇ ಹಕ್ಕು ಮತ್ತು ಅಧಿಕಾರವಿರಲಿಲ್ಲ ಎಂದರೆ ಸರಿಯಲ್ಲ. ಎಂದಿಗೂ ಸಹ ಸದರಿ ಸ್ವಾಮೀಗೌಡರು ದಾವಾ ಆಸ್ತಿಯ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ವಿನಾಕಾರಣ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ**
**ನ್ಯಾಯಾಧೀಶರು ಕೆ.ಆರ್.ನಗರ**